

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 01-02-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಪ್ರಸ್ತಾಪಿಸುವ ಬದರೀ ಸಹಾಬಿಯ ಹೆಸರು ಹಝ್ರತ್ ಅಬೂ ಹುಝೈಫ ಬಿನ್ ಉತ್‌ಬ(ರ). ಅವರು ಎತ್ತರವಾದ ದೇಹವುಳ್ಳವರೂ ಸುಂದರವಾದ ಮುಖವುಳ್ಳವರೂ ಆಗಿದ್ದರು. ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ದಾರ್ ಅರ್‌ಖಮಗೆ ಪ್ರವೇಶಿಸುವ ಮೊದಲೇ ಅಬೂ ಹುಝೈಫ ಮುಸ್ಲಿಮರಾಗಿದ್ದರು. ಅವರು ಆರಂಭದಲ್ಲಿ ಮುಸ್ಲಿಮರಾದವರಲ್ಲಿ ಸೇರಿದ್ದರು. ಅವರ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹೀಗೆ ಬರೆದಿದ್ದಾರೆ: ಹಝ್ರತ್ ಅಬೂ ಹುಝೈಫ ಬಿನ್ ಉತ್‌ಬ ಬನೀ ಉಮಯ್ಯ ಗೋತ್ರದವರಾಗಿದ್ದರು. ಅವರ ತಂದೆ ಉತ್‌ಬ ಬಿನ್ ರಬೀಅ ಖುರೈಶಿಗಳ ನಾಯಕರಲ್ಲಿ ಒಬ್ಬರಾಗಿದ್ದರು. ಹಝ್ರತ್ ಅಬೂ ಹುಝೈಫ ಅಬಿಸೀನಿಯಾ ದೇಶಕ್ಕೆ ಎರಡು ಸಾರಿ ವಲಸೆ ಹೋದವರಲ್ಲಿ ಸೇರಿದ್ದರು. ಅವರ ಪತ್ನಿ ಹಝ್ರತ್ ಸಹ್ಲ ಬಿನ್ತ್ ಸಹೀಲ್ ಸಹ ಅವರ ಜೊತೆಗೆ ಹಿಜ್‌ರತ್ ಮಾಡಿದ್ದರು. ಮುಸ್ಲಿಮರ ಕಷ್ಟಗಳು ಅತ್ಯಂತ ಹೆಚ್ಚಾದಾಗ ಮತ್ತು ಖುರೈಶಿಗಳು ತಮ್ಮ ಹಿಂಸಾಚಾರದಲ್ಲಿ ಮುಂದುವರಿಯುತ್ತಾ ಇದ್ದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರೊಡನೆ ಅಬಿಸೀನಿಯಾಕ್ಕೆ ಹಿಜ್‌ರತ್ ಮಾಡಲು ಹೇಳಿದರು. ಅಬಿಸೀನಿಯಾದ ರಾಜ ನ್ಯಾಯನಿಷ್ಠೆಯುಳ್ಳವರಾಗಿದ್ದಾರೆ. ಅಲ್ಲಿ ಯಾರಮೇಲೂ ದೌರ್ಜನ್ಯವೆಸಗಲ್ಪಡುವುದಿಲ್ಲ. ಆದುದರಿಂದ ಯಾರಿಗೆ ಸಾಧ್ಯವಿದೆಯೋ ಅವರು ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಲಿ ಎಂದು ನಿರ್ದೇಶಿಸಿದರು. ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಪ್ರಕಾರ ನಬವೀ ವರ್ಷದ ರಜಬ್ ತಿಂಗಳಲ್ಲಿ ಹನ್ನೊಂದು ಪುರುಷರು ಮತ್ತು ನಾಲ್ವರು ಮಹಿಳೆಯರು ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದರು. ಅವರೊಂದಿಗೆ ಹಝ್ರತ್ ಅಬೂ ಹುಝೈಫ(ರ) ಸಹ ಇದ್ದರು. ಈ ಮಹಾಜಿರ್‌ಗಳು ದಕ್ಷಿಣದ ಕಡೆಗೆ ಪ್ರಯಾಣಿಸಿ ಅಂದಿನ ಕಾಲದಲ್ಲಿ ಅರಬ್ ದೇಶದ ಒಂದು ಬಂದರು ಆಗಿದ್ದ ಶಈಬಿಯ ತಲಪಿದಾಗ ಅಲ್ಲಾಹನು ಹೇಗೆ ಅವರಿಗೆ ಅನುಗ್ರಹ ನೀಡಿದನೆಂದರೆ ಅಲ್ಲಿಂದ ಅಬಿಸೀನಿಯಾ ದೇಶಕ್ಕೆ ಹೋಗುವ ಒಂದು ಸರಕು ಸಾಗಣಿಯ ಹಡಗು ಆ ದೇಶಕ್ಕೆ ಹೊರಡಲು ಸಿದ್ಧವಾಗಿತ್ತು. ಮಹಾಜಿರ್‌ಗಳು ಅದರಲ್ಲಿ ಪ್ರಯಾಣಿಸಿದರು. ಆ ದೇಶದಲ್ಲಿ ಮುಸ್ಲಿಮರಿಗೆ ಅತ್ಯಂತ ಶಾಂತಿಭರಿತವಾಗಿ ಜೀವಿಸಲು ಸಾಧ್ಯವಾಯಿತು. ಅವರಿಗೆ ಖುರೈಶಿಗಳ ಹಿಂಸಾಚಾರದಿಂದ ಅಲ್ಲಾಹನ ಅನುಗ್ರಹದಿಂದ ಮುಕ್ತಿ ದೊರಕಿತು. ಕೆಲವು ಚರಿತ್ರೆಗಾರರು ಹೀಗೆ ಬರೆದಿದ್ದಾರೆ: ಮುಸ್ಲಿಮರು ಆ ದೇಶದಲ್ಲಿ ವಾಸಿಸಲು ತೊಡಗಿ ಹೆಚ್ಚು ಸಮಯ ದಾಟಿ ಹೋಗುವ ಮೊದಲೇ ಹೀಗೆ ಒಂದು ವದಂತಿ ಹರಡಿತು. ಖುರೈಶಿಗಳೆಲ್ಲರೂ ಮುಸ್ಲಿಮರಾದರು. ಈಗ ಮಕ್ಕದಲ್ಲಿ ಸಂಪೂರ್ಣವಾಗಿ ಶಾಂತಿ ನೆಲೆಸಿದೆ ಎಂದು. ಈ ವದಂತಿಯ ಕಾರಣ ಬಹುತೇಕ ಮುಹಾಜಿರ್‌ಗಳು ಚಿಂತಿಸದೆ ಮರಳಿ ಬಂದರು. ಆದರೆ ಮಕ್ಕ ನಗರಕ್ಕೆ ಸಮೀಪಿಸಿದಾಗ ಅವರಿಗೆ ವಾಸ್ತವಿಕತೆ ಏನೆಂದು ತಿಳಿಯಿತು. ಕೆಲವರು ಅಡಗಿಕೊಂಡು ಮತ್ತು ಬೇರೆ ಕೆಲವರು ಪ್ರಭಾವಶಾಲಿ ಖುರೈಶಿ ಮುಖಂಡರ ರಕ್ಷಣೆ ಪಡೆದು ಮಕ್ಕವನ್ನು ಪ್ರವೇಶಿಸಿದರು. ಉಳಿದವರು ಅಬಿಸೀನಿಯಾ ದೇಶಕ್ಕೆ ಮರಳಿದರು. ಅವರ ಪೂರ್ಣ ವಿವರ ಅಲ್ಲಾಹನಿಗೆ ಮಾತ್ರ ತಿಳಿದಿದೆ.

ಅಬಿಸೀನಿಯಾದಿಂದ ಮರಳಿ ಬಂದವರಲ್ಲಿ ಬಹುಸಂಖ್ಯಾತ ಜನರು ಆ ದೇಶಕ್ಕೆ ಪುನಃ ಮರಳಿದರು. ಖುರೈಶಿಗಳು ದಿನಗಳೆದಂತೆ ತಮ್ಮ ಹಿಂಸಾಚಾರಗಳನ್ನು ತೀವ್ರಗೊಳಿಸುತ್ತಿದ್ದರು. ಅವರ ದೌರ್ಜನ್ಯಗಳು ವರ್ಧಿಸುತ್ತಾ ಇದ್ದುವು. ಆದುದರಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಿರ್ದೇಶ ಪ್ರಕಾರ ಇತರ ಮುಸ್ಲಿಮರು ಸಹ ರಹಸ್ಯವಾಗಿ ಹಿಜ್‌ರತ್ ಮಾಡುವ ಸಿದ್ಧತೆಗಳನ್ನು ನಡೆಸಿದರು. ಅವರು ಸಂದರ್ಭ ನೋಡಿ ಮೆಲ್ಲ ಮೆಲ್ಲನೆ ಹೊರಡಲು ಪ್ರಾರಂಭಿಸಿದರು. ಹಿಜ್‌ರತ್ತಿನ ಈ ಸರಪಳಿ ಹೇಗೆ ಪ್ರಾರಂಭವಾಯಿತೆಂದರೆ ಕೊನೆಗೆ ಮುಹಾಜಿರ್‌ಗಳ ಸಂಖ್ಯೆ ಒಂದುನೂರಾಯಿತು. ಅವರಲ್ಲಿ ಹದಿನೆಂಟು ಜನರು ಮಹಿಳೆಯರಾಗಿದ್ದರು. ಮಕ್ಕದಲ್ಲಿ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಬಹಳ ಕಡಿಮೆ ಸಂಖ್ಯೆಯ ಮುಸ್ಲಿಮರು ಉಳಿದರು. ಈ ಹಿಜ್‌ರತನ್ನು ಕೆಲವು ಚರಿತ್ರೆಗಾರರು ಹಿಜ್‌ರತ್ ಸಾನಿಯ ಎಂದು ಕರೆದಿದ್ದಾರೆ. ಅನಂತರ ಮದೀನದ ಕಡೆಗೆ ಹಿಜ್‌ರತ್ ಮಾಡಲು ಅನುಮತಿ ದೊರೆತಾಗ ಹಝ್ರತ್ ಅಬೂ ಹುಝೈಫ ಮತ್ತು ಅವರ ವಿಮೋಚಿತ ಗುಲಾಮ ಹಝ್ರತ್ ಸಾಲಿಮ್ ಮದೀನದ ಕಡೆಗೆ ಹಿಜ್‌ರತ್ ಮಾಡಿದರು. ಅವರಿಬ್ಬರೂ ಮದೀನದಲ್ಲಿ ಹಝ್ರತ್ ಉಬಾದ್ ಬಿನ್ ಬಶರ್‌ರವರ ಮನೆಯಲ್ಲಿ ವಾಸಿಸಲು ತೊಡಗಿದರು. ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹುಝೈಫ ಮತ್ತು ಹಝ್ರತ್ ಉಬಾದ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಿದರು. ಹಝ್ರತ್ ಅಬೂ ಹುಝೈಫ(ರ)ರವರು ಹಝ್ರತ್ ಅಬ್ದುಲ್ಲಾ ಬಿನ್ ಜಹ್‌ಶ್‌ರವರ ನೇತೃತ್ವದಲ್ಲಿ ನಡೆದ ಹೋರಾಟದಲ್ಲಿ ಸಹ ಭಾಗವಹಿಸಿದ್ದರು. ಈ ಹೋರಾಟದ ಚರಿತ್ರೆ ಹೀಗಿದೆ: ಮಕ್ಕದ ಒಬ್ಬ ಮುಖಂಡನಾಗಿದ್ದ ಕರ್‌ಝ್ ಬಿನ್ ಜಾಬಿರ್ ಬಿನ್ ಫಹ್‌ರೀ ಖುರೈಶಿಗಳ ಒಂದು ಸೇನಾದಳದ ಜೊತೆಗೆ ಮಕ್ಕದಿಂದ ಹೊರಟು ಮದೀನದಿಂದ ಕೇವಲ ಮೂರು ಮೈಲು ದೂರವಿದ್ದ ಹುಲ್ಲುಗಾವಲಿನ ಮೇಲೆ ದಾಳಿ ಮಾಡಿ

ಮುಸ್ಲಿಮರ ಒಂಟೆ ಮೊದಲಾದುವುಗಳನ್ನು ಲೂಟಿ ಮಾಡಿ ತೆಗೆದುಕೊಂಡು ಹೋಗಿದ್ದನು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಘಟನೆ ಬಗ್ಗೆ ತಿಳಿದಾಗ ಕೂಡಲೆ ಝೈದ್ ಬಿನ್ ಹಾರಿಸ್‌ರನ್ನು ತನ್ನ ಅನುಪಸ್ಥಿತಿಯಲ್ಲಿ ಮದೀನದ ಅಮೀರರನ್ನಾಗಿ ನೇಮಿಸಿ ಮಹಾಜಿರ್‌ಗಳ ಒಂದು ತಂಡದೊಂದಿಗೆ ಅವರನ್ನು ಬೆನ್ನಟ್ಟಿದರು. ಬದರ್ ಸಮೀಪ ಸಫ್‌ವಾನ್ ಎಂಬಲ್ಲಿ ಅವನ ಸಮೀಪಕ್ಕೆ ತಲಪಿದರೂ ಅವನು ತಪ್ಪಿಸಿಕೊಂಡು ಹೋಗಿಬಿಟ್ಟನು. ಈ ಯುದ್ಧವನ್ನು ಬದರುಲ್ ಊಲಾ ಯುದ್ಧ ಎಂದು ಸಹ ಹೇಳುತ್ತಾರೆ. ಕರ್‌ಝ್ ಬಿನ್ ಜಾಬಿರ್ ನಡೆಸಿದ ಆಕ್ರಮಣವನ್ನು ಗ್ರಾಮೀಣ ಅರಬಿಯೊಬ್ಬ ನಡೆಸಿದ ಸಾಮಾನ್ಯ ಲೂಟಿ ಎಂದು ಹೇಳಲು ಸಾಧ್ಯವಿಲ್ಲ. ನಿಶ್ಚಯವಾಗಿಯೂ ಅವನು ಖುರೈಶಿಗಳ ಕಡೆಯಿಂದ ಮುಸ್ಲಿಮರ ವಿರುದ್ಧ ವಿಶಿಷ್ಟ ಇರಾದೆಯಿಂದ ಆಗಮಿಸಿದ್ದನು. ಅವನ ಉದ್ದೇಶ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಾನಿಯನ್ನುಂಟು ಮಾಡುವುದಾಗಿರಬಹುದು. ಆದರೆ ಮುಸ್ಲಿಮರು ಜಾಗರೂಕರಾಗಿರುವುದನ್ನು ಅರಿತುಕೊಂಡು ಒಂಟೆಗಳನ್ನು ಲೂಟಿ ಮಾಡಿ ಹೋದನು. ಮದೀನದ ಮೇಲೆ ನಿರಂತರ ಆಕ್ರಮಣ ನಡೆಸಿ ಅಲ್ಲಿರುವ ಮುಸ್ಲಿಮರನ್ನು ನಾಶಮಾಡುವ ಉದ್ದೇಶ ಸಹ ಖುರೈಶಿಗಳಿಗಿತ್ತೆಂದು ಸ್ಪಷ್ಟವಾಗಿ ಈ ಘಟನೆಯಿಂದ ತಿಳಿಯುತ್ತದೆ. ಕರ್‌ಝ್ ಬಿನ್ ಜಾಬಿರನ ಅಚಾನಕ ಆಕ್ರಮಣ ಮುಸ್ಲಿಮರನ್ನು ಸಹಜವಾಗಿ ಬಹಳ ಹೆದರುವಂತೆ ಮಾಡಿತು. ಖುರೈಶಿಗಳ ಮುಖಂಡರು ಮದೀನವನ್ನು ಆಕ್ರಮಿಸಿ ಮುಸ್ಲಿಮರನ್ನು ನಾಶ ಮಾಡುವುದಾಗಿ ಮೊದಲೇ ಬೆದರಿಕೆ ಹಾಕಿದ್ದುದರಿಂದ ಮುಸ್ಲಿಮರು ಬಹಳ ವ್ಯಾಕುಲಗೊಂಡಿದ್ದರು. ಈ ಅಪಾಯಗಳನ್ನು ಪರಿಗಣಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶಿಗಳ ಚಲನ ವಲನಗಳನ್ನು ಅವರಿಗೆ ಸಮೀಪವಾಗಿದ್ದುಕೊಂಡು ತಿಳಿದುಕೊಳ್ಳಬೇಕೆಂದು ಬಯಸಿದರು. ಈ ಕೆಲಸಕ್ಕೋಸ್ಕರ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಂಟು ಮಹಾಜಿರ್‌ಗಳ ಒಂದು ತಂಡವನ್ನು ರೂಪಿಸಿದರು. ಅವರಲ್ಲಿ ಖುರೈಶಿಗಳ ವಿವಿಧ ಗೋತ್ರಗಳ ಜನರಿರುವಂತೆ ಉದ್ದೇಶಪೂರ್ವಕವಾಗಿ ಮಾಡಿದರು. ಆ ಮೂಲಕ ಖುರೈಶಿಗಳ ರಹಸ್ಯ ಯೋಜನೆಗಳ ಬಗ್ಗೆ ಸುಲಭವಾಗಿ ತಿಳಿಯುವುದು ಅದರ ಉದ್ದೇಶವಾಗಿತ್ತು. ಆ ತಂಡಕ್ಕೆ ತನ್ನ ಪಿತೃ ಸಹೋದರಿಯ ಪುತ್ರನಾದ ಅಬ್ದುಲ್ಲಾ ಬಿನ್ ಜುಹ್‌ಶ್‌ರನ್ನು ಅಮೀರರನ್ನಾಗಿ ನೇಮಿಸಿದರು. ಈ ತಂಡದಲ್ಲಿ ಹುಝೈಫ ಬಿನ್ ಉತ್‌ಬ ಸಹ ಇದ್ದರು.

ಈ ಎಂಟು ಜನರಿದ್ದ ತಂಡ ಮದೀನದಿಂದ ಹೊರಟು ಎರಡು ದಿನ ಪ್ರಯಾಣ ಮಾಡಿ ಹಝ್ರತ್ ನಬಿ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮಾರ್ಗದರ್ಶನ ಪ್ರಕಾರ ಮಕ್ಕ ಮತ್ತು ತಾಯಿಫ್ ಮಧ್ಯೆ ಇರುವ ನಖ್‌ಲ ಕಣಿವೆ ಕಡೆಗೆ ಹೊರಟಿತು. ಮಾರ್ಗದಲ್ಲಿ ಸಅದ್ ಬಿನ್ ಅಬೀ ವಖಾಸ್ ಮತ್ತು ಉತ್‌ಬ ಬಿನ್ ಗಝ್‌ವಾನ್ ಎಂಬ ಇಬ್ಬರ ಒಂಟೆಗಳು ಕಾಣೆಯಾದುವು. ಅವರಿಬ್ಬರೂ ಆ ಒಂಟೆಗಳನ್ನು ಹುಡುಕುತ್ತಾ ಹಿಂದೆ ಉಳಿದರು. ಅವರಿಗೆ ಒಂಟೆಗಳು ಕಾಣಲು ಸಿಗಲಿಲ್ಲ. ಆ ಕಾರಣದಿಂದ ಈ ತಂಡದ ಜನರ ಸಂಖ್ಯೆ ಆರು ಆಯಿತು. ಮುಸ್ಲಿಮರ ಈ ಸಣ್ಣ ತಂಡ ನಖ್‌ಲವನ್ನು ತಲಪಿ ತಮ್ಮ ಉದ್ದೇಶಿತ ಕೆಲಸದಲ್ಲಿ ನಿರತವಾಯಿತು. ಅವರಲ್ಲಿ ಕೆಲವರು ತಮ್ಮ ತಲೆಗೂದಲನ್ನು ಮುಂಡನ ಮಾಡಿ ತಾವು ಉಮ್ರಕ್ಕೋಸ್ಕರ ಹೋಗುವವರು ಎಂದು ಹಾದಿಹೋಕರು ತಿಳಿಯಲಿ ಎಂದು ಯೋಚಿಸಿದ್ದರು. ಆ ತಂಡದ ಜನರು ಆ ಸ್ಥಳಕ್ಕೆ ತಲಪಿದಾಗ ಅಚಾನಕವಾಗಿ ಅಲ್ಲಿಗೆ ಖುರೈಶಿಗಳ ಒಂದು ಚಿಕ್ಕ ವ್ಯಾಪಾರ ಸಂಘ ಆಗಮಿಸಿತು. ಅದು ತಾಯಿಫ್‌ನಿಂದ ಮಕ್ಕದ ಕಡೆಗೆ ಸಾಗುತ್ತಿತ್ತು. ಈ ಎರಡು ತಂಡಗಳು ಒಂದು ಇನ್ನೊಂದಕ್ಕೆ ಎದುರಾಯಿತು. ಅವರು ಮುಸ್ಲಿಮರೆಂದು ಖುರೈಶಿ ತಂಡದವರಿಗೆ ತಿಳಿಯಿತು. ಅವರು ಮುಸ್ಲಿಮರ ತಂಡದೊಂದಿಗೆ ಹೋರಾಡಲು ನಿರ್ಧರಿಸಿದರು. ಮುಸ್ಲಿಮರು ಈಗ ಏನು ಮಾಡಬೇಕೆಂದು ಸಮಾಲೋಚಿಸಿದರು. ಏಕೆಂದರೆ ಅವರನ್ನು ರಹಸ್ಯ ಸಮಾಚಾರ ತಿಳಿಯಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಳುಹಿಸಿದ್ದರು. ಆದರೆ ಆಗ ಖುರೈಶಿಗಳೊಂದಿಗೆ ಯುದ್ಧ ಪ್ರಾರಂಭವಾಗಿತ್ತು. ಎರಡು ತಂಡಗಳು ಎದುರು ಬದುರಾಗಿದ್ದುವು. ಅಲ್ಲದೆ ಇನ್ನೊಂದು ಅಪಾಯವಿತ್ತು. ಖುರೈಶಿಗಳು ಈ ರಹಸ್ಯಾನ್ವೇಷಕ ತಂಡವನ್ನು ಕಂಡ ಕಾರಣ ಅವರ ಉದ್ದೇಶ ಸಹ ರಹಸ್ಯವಾಗಿರಲು ಸಾಧ್ಯವಿರಲಿಲ್ಲ. ಕೆಲವು ಮುಸ್ಲಿಮರು ಹೀಗೆ ಸಹ ಯೋಚಿಸಿದ್ದರು, ಯುದ್ಧ ನಿಷಿದ್ಧವಾದ ತಿಂಗಳ ಕೊನೆಯ ಭಾಗ ಇದಾಗಿದೆ. ಅರಬಿಗಳ ಪುರಾತನ ಸಂಪ್ರದಾಯ ಪ್ರಕಾರ ಈ ತಿಂಗಳುಗಳಲ್ಲಿ ಯುದ್ಧ ನಿಷಿದ್ಧವಾಗಿತ್ತು. ನಖ್‌ಲ, ಹರಮ್ ಪ್ರದೇಶದಲ್ಲಿ (ಯುದ್ಧ ನಿಷಿದ್ಧ ಪ್ರದೇಶದಲ್ಲಿ) ಸೇರಿದೆ ಎಂದು ಸಹ ಕೆಲವರು ಯೋಚಿಸಿದ್ದರು. ಮುಸ್ಲಿಮರು ಹೀಗೆ ನಿರ್ಧರಿಸಿದರು. ಅವಿಶ್ವಾಸಿಗಳ ತಂಡವನ್ನು ಆಕ್ರಮಿಸಿ ಸೆರೆ ಹಿಡಿಯಬೇಕು ಅಥವಾ ಕೊಲ್ಲಬೇಕು ಎಂದು. ಹಾಗೆ ಮುಸ್ಲಿಮರು ಅಲ್ಲಾಹನ ನಾಮದೊಂದಿಗೆ ದಾಳಿ ನಡೆಸಿದರು. ಅವಿಶ್ವಾಸಿಗಳ ತಂಡದ ಅಮರ್ ಬಿನ್ ಅಲ್ ಹಝ್ರಮೀ ಕೊಲ್ಲಲ್ಪಟ್ಟನು. ಇಬ್ಬರನ್ನು ಸೆರೆ ಹಿಡಿಯಲಾಯಿತು. ನಾಲ್ಕನೆಯ ವ್ಯಕ್ತಿ ಓಡಿ ಹೋದನು. ಅವನನ್ನು ಸೆರೆಹಿಡಿಯಲಾಗಲಿಲ್ಲ. ಆದುದರಿಂದ ಅವಿಶ್ವಾಸಿಗಳನ್ನು ಸೆರೆ ಹಿಡಿಯಬೇಕು ಅಥವಾ ಕೊಲ್ಲಬೇಕು ಎಂಬ ನಿರ್ಧಾರ ಪೂರ್ಣವಾಗಿ ಈಡೇರಲಿಲ್ಲ. ಮುಸ್ಲಿಮರು ಶತ್ರುಗಳ ಸಾಮಾಗ್ರಿಗಳನ್ನು ಸ್ವಾಧೀನ ಪಡಿಸಿಕೊಂಡರು. ಖುರೈಶಿಗಳಲ್ಲಿ ಒಬ್ಬ ಓಡಿಹೋಗಿ ಈ ಸಮಾಚಾರ ಮಕ್ಕದ ಖುರೈಶಿಗಳಿಗೆ ಹೇಳುವಾಗ ಅವರು ಬೇಗನೆ ನಖ್‌ಲಕ್ಕೆ ಆಗಮಿಸುವರು ಎಂಬ ಭಯವಿದ್ದ ಕಾರಣ ಅಬ್ದುಲ್ಲ ಬಿನ್ ಜುಹ್‌ಶ್ ತನ್ನ ಸಂಗಡಿಗರೊಂದಿಗೆ ವಶಪಡಿಸಿಕೊಂಡ ಸಾಮಗ್ರಿಗಳ ಸಮೇತ ಬೇಗನೆ ಮದೀನದ ಕಡೆಗೆ ಮರಳಿದರು.

ಸಹಾಬರು ವ್ಯಾಪಾರ ಸಂಘವನ್ನು ಆಕ್ರಮಿಸಿದ ಸಮಾಚಾರ ತಿಳಿದಾಗ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೀವ್ರವಾಗಿ ಕೋಪಗೊಂಡರು. 'ನಿಷಿದ್ಧ ಮಾಸದಲ್ಲಿ ಹೋರಾಡಲು ನಿಮಗೆ ನಾನು ಅನುಮತಿ ನೀಡಿರಲಿಲ್ಲ' ಎಂದು ಹೇಳಿದರು. ವಶಪಡಿಸಿಕೊಂಡ ಸಂಪತ್ತನ್ನು ತೆಗೆದುಕೊಳ್ಳಲು ಸಹ ಅವರು ನಿರಾಕರಿಸಿದರು. ಅದರಿಂದ ನನಗೆ ಏನೂ ಬೇಡ ಎಂದು ಹೇಳಿದರು. ಅಬ್ದುಲ್ಲಾ ಮತ್ತು ಸಂಗಡಿಗರು ಬಹಳ ಲಜ್ಜಿತರೂ ಪಶ್ಚಾತ್ತಾಪಗೊಂಡವರೂ

ಆದರು. ಅಲ್ಲಾಹನ ಮತ್ತು ಅವನ ರಸೂಲರ ಕೋಪದ ಕಾರಣ ನಾವು ನಾಶವಾದೆವು ಎಂದು ಯೋಚಿಸಿದರು. ಮತ್ತೊಂದೆಡೆ ಮುಸ್ಲಿಮರು ನಿಷಿದ್ಧ ಮಾಸವನ್ನು ಉಲ್ಲಂಘಿಸಿರುವರು ಎಂದು ಖುರೈಶಿಗಳು ಗುಲ್ಲೆಬ್ಬಿಸಿದರು. ಕೊನೆಗೆ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾದುವು ಮತ್ತು ಮುಸ್ಲಿಮರಿಗೆ ಸಮಾಧಾನ ಲಭಿಸಿತು.

ಚರಿತ್ರೆಯಿಂದ ಸಾಬೀತಾಗುವುದೇನೆಂದರೆ ಇಸ್ಲಾಮ್ ವಿರುದ್ಧ ಖುರೈಶರು ನಿಷಿದ್ಧ ಮಾಸಗಳಲ್ಲೂ ರಕ್ತಪಾತ ಮಾಡುತ್ತಿದ್ದರು. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಅವತೀರ್ಣಗೊಳಿಸಿದ ವಚನಗಳಿಂದ ಮುಸ್ಲಿಮರಿಗೆ ಸಾಂತ್ವನ ದೊರಕಿತಲ್ಲದೆ ಖುರೈಶರು ಸಹ ಸ್ವಲ್ಪ ತಣ್ಣಗಾದರು. ಸೆರೆ ಹಿಡಿದ ಅವಿಶ್ವಾಸಿಗಳನ್ನು ಪರಿಹಾರ ಧನ ಪಡೆದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬಿಡುಗಡೆ ಮಾಡಿದರು. ಆದರೆ ಬಿಡುಗಡೆ ಹೊಂದಿದ ಸೆರೆಯಾಳುಗಳಲ್ಲಿ ಒಬ್ಬನು ತನ್ನ ಮದೀನ ವಾಸದ ಸಮಯದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸದ್ಗುಣಗಳು ಮತ್ತು ಇಸ್ಲಾಮೀ ಉಪದೇಶಗಳ ಸತ್ಯತೆಗಳಿಂದ ಎಷ್ಟು ಆಳವಾಗಿ ಪ್ರಭಾವಿತನಾಗಿದ್ದನೆಂದರೆ ಅವನು ಸ್ವಾತಂತ್ರ್ಯ ಗಳಿಸಿಯೂ ಮರಳಿ ಹೋಗಲು ನಿರಾಕರಿಸಿದನು. ಅವನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೈಯಲ್ಲಿ ಬೈಅತ್ ಮಾಡಿ ಮುಸ್ಲಿಮನಾದನು ಹಾಗೂ ಅವರ ಸಮೀಪವರ್ತಿಗಳಲ್ಲಿ ಸೇರಿದನು. ಕೊನೆಗೆ ಅವರು ಬಿಅ್‌ರ್ ಮಊನದ ಘಟನೆಯಲ್ಲಿ ಶಹೀದರಾದರು. ಅವರ ಹೆಸರು ಹಕಮ್ ಬಿನ್ ಖೈಸಾನ್ ಎಂದಾಗಿತ್ತು.

ಹಝ್ರತ್ ಅಬೂ ಹುಝೈಫ(ರ) ಬಗ್ಗೆ ಹೀಗೆ ಸಹ ವರದಿಯಾಗಿದೆ: ಬದರ್ ಯುದ್ಧದ ದಿನ ಅವರು ತನ್ನ ಅವಿಶ್ವಾಸಿಯಾದ ಪಿತನ ಎದುರಿಗೆ ಬಂದು ಹೋರಾಡಲು ಸಿದ್ಧರಾದಾಗ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರನ್ನು ತಡೆದು ಹೇಳಿದರು: ಅವರನ್ನು ಬಿಡಿರಿ. ಬೇರೆ ಯಾರಾದರೂ ಅವರನ್ನು ಹತ್ಯೆ ಮಾಡಲಿ ಎಂದು. ಆ ಯುದ್ಧದಲ್ಲಿ ಹಝ್ರತ್ ಹುಝೈಫರ ಪಿತ, ಚಿಕ್ಕಪ್ಪ, ಸಹೋದರ, ಸಹೋದರ ಪುತ್ರ ಎಲ್ಲರೂ ಕೊಲ್ಲಲ್ಪಟ್ಟರು. ಹಝ್ರತ್ ಅಬೂ ಹುಝೈಫ ಬಹಳ ಸಹನೆದೋರಿದರು. ಅಲ್ಲಾಹನ ತೃಪ್ತಿಗನುಸಾರವಾಗಿ ತೃಪ್ತರಾದರು. ಅಲ್ಲಾಹನು ನೀಡಿದ ಸಹಾಯದಿಂದ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಜಯ ಗಳಿಸಿದ ಬಗ್ಗೆ ಅವರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಿದರು.

ಈ ಘಟನೆಗೆ ಸಂಬಂಧಿಸಿ ಒಂದು ವರದಿ ಹೀಗಿದೆ: ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಬದರ್ ಯುದ್ಧದ ದಿನ ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹ್ ಅಲೈಹಿ ವಸಲ್ಲಮ್ ಹೇಳಿದರು: ನಿಮ್ಮ ಪೈಕಿ ಯಾರದಾದರೂ ಎದುರಿಗೆ ಅಬ್ಬಾಸ್ ಬಂದರೆ ಅವರನ್ನು ಕೊಲ್ಲಬೇಡಿರಿ. ಏಕೆಂದರೆ ಅವರು ನಿರ್ಬಂಧಿಸಲ್ಪಟ್ಟು ಯುದ್ಧದಲ್ಲಿ ಭಾಗವಹಿಸುತ್ತಿದ್ದಾರೆ. ಅವರನ್ನು ಬಂಧಿಸಿರಿ. ಅವರನ್ನು ಕೊಲ್ಲಬೇಡಿರಿ ಎಂದು. ಈ ವಿಷಯ ಹಝ್ರತ್ ಅಬೂ ಹುಝೈಫರಿಗೆ ತಿಳಿದಾಗ ಅವರು ಹೇಳಿದರು: ನಾವು ನಮ್ಮ ತಂದೆ, ಸಹೋದರ ಹಾಗೂ ಸಂಬಂಧಿಕರನ್ನು ಕೊಲ್ಲಬಹುದು ಆದರೆ ಅಬ್ಬಾಸರನ್ನು ಬಿಟ್ಟುಬಿಡಬೇಕೆ. ಇದೇನಾಗಿದೆ. ಅಲ್ಲಾಹನಾಣೆ ನನ್ನ ಎದುರಿಗೇನಾದರೂ ಅವರು ಬಂದರೆ ನಾನು ಅವರ ವಿರುದ್ಧ ಖಡ್ಗ ಚಲಾಯಿಸುವೆನು. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಮಾತುಗಳು ತಲಪಿದಾಗ ಅವರು ಹಝ್ರತ್ ಉಮರ್(ರ)ರೊಂದಿಗೆ ಹೇಳಿದರು: ಓ ಅಬೂ ಹಫ್ಸ್ ಅಲ್ಲಾಹನ ರಸೂಲರ ಚಿಕ್ಕಪ್ಪನ ಮುಖದ ಮೇಲೆ ಖಡ್ಗ ಪ್ರಹಾರ ನಡೆಸಲ್ಪಡುವುದೇ? ಹಝ್ರತ್ ಉಮರ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ಆತನ ಕತ್ತನ್ನು ಕತ್ತರಿಸಲು ನನಗೆ ಅನುಮತಿ ನೀಡಿರಿ. ಅಲ್ಲಾಹನಾಣೆ ಇದರಲ್ಲಿ ನಿಫಾಖ್ (ಕಾಪಟ್ಯ) ಇದೆ. ಆದರೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅದಕ್ಕೆ ಅನುಮತಿ ನೀಡಲಿಲ್ಲ. ಹಝ್ರತ್ ಅಬೂ ಹುಝೈಫ ಹೇಳುತ್ತಾ ಇದ್ದರು. ನಾನು ಆ ದಿನ ಹೇಳಿದ ಮಾತಿನ ಕೆಡುಕಿನಿಂದ ರಕ್ಷಣೆ ಪಡೆಯಲಾರೆ. ಶಹಾದತ್ ಮೂಲಕ ಮೃತ್ಯು ಬರುವುದರ ಹೊರತು ಬೇರೇನೂ ಅದರ ಕೆಡುಕಿನಿಂದ ನನ್ನನ್ನು ರಕ್ಷಿಸಲಾರದು. ವರದಿಗಾರ ಹೇಳುತ್ತಾರೆ, ಯಮಾಮ ಯುದ್ಧದಲ್ಲಿ ಹಝ್ರತ್ ಅಬೂ ಹುಝೈಫರು ಶಹಾದತ್ ಪದವಿ ಗಳಿಸಿದರು.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಬದರ್ ಯುದ್ಧದಲ್ಲಿ ಮೃತರಾದ ಬಹುದೇವಾರಾಧಕರ ಶವಗಳನ್ನು ಒಂದು ಹೊಂಡಕ್ಕೆಸೆಯಲು ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಜ್ಞಾಪಿಸಿದರು. ಆ ರೀತಿ ಎಸೆಯುತ್ತಿರುವಾಗ ಹಝ್ರತ್ ಅಬೂ ಹುಝೈಫರ ಮುಖ ಚಹರೆಯಲ್ಲಿ ಅತೃಪ್ತಿಯ ಚಿಹ್ನೆಗಳು ಪ್ರಕಟವಾದುವು. ಏಕೆಂದರೆ ಅವರ ಪಿತರ ಮೃತ ಶರೀರವನ್ನು ಸಹ ಆ ಹೊಂಡಕ್ಕೆಸೆಯಲಾಗುತ್ತಿತ್ತು. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಓ ಅಬೂ ಹುಝೈಫ, ಅಲ್ಲಾಹನಾಣೆ ನಿಮ್ಮ ತಂದೆಯವರೊಂದಿಗೆ ವರ್ತಿಸಲಾಗುವ ರೀತಿಯನ್ನು ನೋಡಿ ನಿಮಗೆ ಅದು ಕೆಟ್ಟದಾಗಿ ತೋರುತ್ತಿದೆ ಅಲ್ಲವೇ? ಆಗ ಹಝ್ರತ್ ಅಬೂ ಹುಝೈಫ ಹೇಳಿದರು: ಅಲ್ಲಾಹನ ರಸೂಲರೇ, ನನಗೆ ಅಲ್ಲಾಹ್ ಮತ್ತು ಅವನ ರಸೂಲರ ಬಗ್ಗೆ ಯಾವ ಸಂಶಯವೂ ಇಲ್ಲ. ಆದರೆ ನನ್ನ ಪಿತ ಸಹಿಷ್ಣು ಮನೋಭಾವದವರೂ, ಸತ್ಯಸಂಧರೂ, ಬುದ್ಧಿಶಾಲಿಯೂ ಆಗಿದ್ದರು. ಅವರಲ್ಲಿ ಕೆಟ್ಟ ಸಂಕಲ್ಪವಿರಲಿಲ್ಲ. ಅವರು ಮೃತರಾಗುವ ಮೊದಲು ಅಲ್ಲಾಹನು ಅವರಿಗೆ ಇಸ್ಲಾಮ್ ಕಡೆಗೆ ಮಾರ್ಗದರ್ಶನ ನೀಡಲಿ ಎಂದು ನಾನು ಇಚ್ಛಿಸಿದ್ದೆ. ಆದರೆ ಹೀಗೆ ಸಂಭವಿಸಿರುವುದು ಸಂಭವಿಸಬೇಕಾದುದೇ ಆಗಿದೆ. ಅವರ ಈ ಅಂತಿಮ ಗತಿಯನ್ನು ನೋಡಿ ನನಗೆ ದುಃಖವಾಗುತ್ತದೆ. ಆಗ ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಬೂ ಹುಝೈಫರಿಗೆ ಒಳಿತುಂಟಾಗಲಿ ಎಂದು ಪ್ರಾರ್ಥನೆ ಮಾಡಿದರು. ಹಝ್ರತ್ ಅಬೂ ಹುಝೈಫ ಎಲ್ಲಾ ಯುದ್ಧಗಳಲ್ಲಿ ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಹಝ್ರತ್ ಅಬೂಬಕರ್(ರ)ರವರ ಖಿಲಾಫತ್ ಕಾಲದಲ್ಲಿ ಯಮಾಮ ಯುದ್ಧದಲ್ಲಿ 53 ಅಥವಾ 54ನೇ ಪ್ರಾಯದಲ್ಲಿ ಅವರು ಶಹೀದರಾದರು.

ಇನ್ನು ನಾನು ನಮ್ಮ ಜಮಾಅತಿಗೆ ದೀರ್ಘಕಾಲದಿಂದ ಸೇವೆಸಲ್ಲಿಸಿದ ಒಬ್ಬ ಹಿರಿಯರಾದ ಪ್ರೊಫೆಸರ್ ಸಊದ್ ಅಹ್ಮದ್ ಖಾನ್ ಸಾಹಿಬ್ ದೆಹ್ಲವಿ ಬಗ್ಗೆ ಪ್ರಸ್ತಾಪಿಸುವೆನು. ಅವರು ಜನವರಿ ದಿನಾಂಕ 21ರಂದು ನಿಧನ ಹೊಂದಿದರು. **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಪಿತ ಹಝ್ರತ್ ಮುಹಮ್ಮದ್ ಹಸನ್ ಇಹ್‌ಸಾನ್ ದೆಹ್ಲವಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಗಳಲ್ಲಿ ಒಬ್ಬರಾಗಿದ್ದರು. ಅದೇ ರೀತಿ ಅವರ ಪಿತಾಮಹ ಹಝ್ರತ್ ಮಹ್‌ಮೂದ್ ಹಸನ್ ಖಾನ್ ಸಾಹಿಬ್ ಮುದರ್ರಿಸ್ ಪಟಿಯಾಲ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ 313 ಸಹಾಬರ ಪಟ್ಟಿಯಲ್ಲಿ 301ನೇ ಕ್ರಮಾಂಕದಲ್ಲಿ ಅವರ ಹೆಸರನ್ನು ನಮೂದಿಸಿದ್ದಾರೆ. ಪ್ರೊಫೆಸರ್ ಸಊದ್ ಖಾನ್ ಸಾಹಿಬರ ಪಿತ ಹಝ್ರತ್ ಮುಹಮ್ಮದ್ ಇಹ್‌ಸಾನ್ ದೆಹ್ಲವಿ ಸಾಹಿಬ್ ತನ್ನ ಹತ್ತು-ಹನ್ನೆರಡು ವರ್ಷ ಪ್ರಾಯದಲ್ಲಿ ಖಾದಿಯಾನಿಗೆ ಹೋದಾಗ ಅವರಿಗೆ ಖುತ್‌ಬ ಇಲ್‌ಹಾಮಿಯ್ಯದ ವೈಭವಶಾಲಿ ದೃಷ್ಟಾಂತವನ್ನು ಕಣ್ಣಾರೆ ಕಾಣುವ ಭಾಗ್ಯ ಲಭಿಸಿತ್ತು. ಪ್ರೊಫೆಸರ್ ಸಊದ್ ಖಾನ್ ಸಾಹಿಬರು 1945ರಲ್ಲಿ ವಕ್‌ಫ್ ಮಾಡಿದ್ದರು. ಅವರು ಅಲಿಗಢ್ ಯುನಿವರ್ಸಿಟಿಯಿಂದ ಫಾರ್ಸಿ ಭಾಷೆಯಲ್ಲಿ ಬಿ.ಎ. ಆನರ್ಸ್ ಬಿರುದು ಗಳಿಸಿದ್ದರು. ಅವರ ಜೊತೆ ಅವರ ಸಹೋದರರು ವಕ್‌ಫ್ ಮಾಡಿದ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು 1955ರಲ್ಲಿ ಒಂದು ಜುಮುಅ ಖುತ್‌ಬದಲ್ಲಿ ಹೀಗೆ ಹೇಳಿದರು: ಮಾಸ್ಟರ್ ಮುಹಮ್ಮದ್ ಹಸನ್ ಇಹ್‌ಸಾನ್ ಸಾಹಿಬರು ತೋರಿಸಿದ ಮಾದರಿ ಸ್ತುತ್ಯರ್ಹವಾಗಿದೆ. ಅವರೊಬ್ಬ ಸಾಮಾನ್ಯ ಅಧ್ಯಾಪಕರಾಗಿದ್ದರು. ಅವರು ಬಡವರಾಗಿದ್ದರು. ಅವರು ಹಸಿವೆ ಸಹಿಸಿ ತನ್ನ ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ ಅವರನ್ನು ಗ್ರಾಜ್ಯುವೇಟ್ ಮಾಡಿದರು. ಏಳು ಪುತ್ರರಲ್ಲಿ ನಾಲ್ವರನ್ನು ಜಮಾಅತಿನ ಸೇವೆಗೆ ಅರ್ಪಿಸಿದರು. ಈ ನಾಲ್ವರು ಸಹ ಈಗ ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು 1950ರಲ್ಲಿ ಅವರನ್ನು ಘಾನ ದೇಶಕ್ಕೆ ಜಮಾಅತಿಗೆ ಸೇವೆ ಸಲ್ಲಿಸಲು ಕಳುಹಿಸಿದರು. 1950ರಲ್ಲಿ ಪಶ್ಚಿಮ ಆಫ್ರಿಕ, ಪೂರ್ವ ಆಫ್ರಿಕ ಮತ್ತು ಹಾಲೆಂಡ್‌ಗೆ ಕಳುಹಿಸಲಾದ ಎಂಟು ಮುಬಲ್ಲಿಗರ ಪಟ್ಟಿಯಲ್ಲಿ ಅವರ ಹೆಸರು ಮೊದಲು ನಮೂದಿಸಲಾಗಿದೆ.

ಪ್ರೊಫೆಸರ್ ಸಊದ್ ಖಾನರ ಶಿಷ್ಯರಲ್ಲಿ ಘಾನದ ಮುಕರ್ರಮ್ ಅಬ್ದುಲ್ ವಹ್ಹಾಬ್ ಆದಮ್ ಸಾಹಿಬ್ ಮತ್ತು ಬಿ.ಕೆ. ಆಡೂ ಸಾಹಿಬರು ಸೇರಿದ್ದರು. 1968ರಲ್ಲಿ ಪಾಕಿಸ್ಥಾನಕ್ಕೆ ಮರಳಿ ಬಂದಾಗ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸರು ಮುಕರ್ರಮ್ ಪ್ರೊಫೆಸರ್ ಸಊದ್ ಅಹ್ಮದ್ ಖಾನ್ ಸಾಹಿಬರಿಗೆ ರಬ್ವದ ತಅ್‌ಲೀಮುಲ್ ಇಸ್ಲಾಮ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ನೀಡುವ ಹೊಣೆಗಾರಿಕೆ ನೀಡಿದರು. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್ ರಹಿಮಹುಲ್ಲಾಹು ಅವರನ್ನು ಜಾಮಿಅ ಅಹ್ಮದಿಯಾದಲ್ಲಿ ಒಂದು ವರ್ಷಕ್ಕೆ ಇಂಗ್ಲಿಷ್ ಅಧ್ಯಾಪಕರನ್ನಾಗಿ ನೇಮಿಸಿದ್ದರು. ಅವರ ಪುತ್ರಿ ರಾಶಿದ ಸಾಹಿಬ ಬರೆಯುತ್ತಾರೆ: ನನ್ನ ಪಿತ ಅತ್ಯಂತ ಮೃದು ಸ್ವಭಾವಿಯೂ ಸೌಮ್ಯ ಪ್ರಕೃತಿಯ ಬೃಹತ್ ಮಟ್ಟದ ವಿದ್ವಾಂಸರೂ ಆಗಿದ್ದರು. ಅವರು ಅತ್ಯಂತ ಆರಾಧನೆ ಪ್ರಿಯರೂ, ತಹಜ್ಜುದ್ ಅನುಷ್ಠಿಸುವವರೂ ಆದ ಹಿರಿಯರಾಗಿದ್ದರು. ಅವರು ಅತಿಥಿ ಸತ್ಕಾರ ಮಾಡುವವರೂ ಅನ್ಯರಿಗೆ ಗೌರವ ನೀಡುವವರೂ ಆಗಿದ್ದರು. ಅವರ ಸಹೋದರ ಪುತ್ರ ಮುಬಲ್ಲಿಗರಾದ ನಫೀಸ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಅವರು ಅತ್ಯಂತ ಸೌಮ್ಯ ಸ್ವಭಾವಿಯಾಗಿದ್ದರು. ಮುತ್ತಖಿಯಾಗಿದ್ದರು. ಮುತವಕ್ಕಿಲ್ ಅಲಲ್ಲಾಹ್ (ಅಲ್ಲಾಹನ ಮೇಲೆ ಭರವಸೆ ಹೊಂದಿದವರು) ಆಗಿದ್ದರು. ಅವರು ಸಾತ್ವಿಕರಾದ ಸರಳ ಮನುಷ್ಯರಾಗಿದ್ದರು. ಅವರ ನಿಷ್ಠೆ ಮತ್ತು ಧಾರ್ಮಿಕ ಸೇವೆಯ ಮನೋಭಾವ ಎಲ್ಲ ವಾಕಿಫೀನೆ ಝಿಂದಗಿಗಳಿಗೆ ಅನುಕರಣೀಯ ಮಾದರಿಯಾಗಿದೆ.

ವಾಸ್ತವಿಕವಾಗಿ ಅವರ ಒಳಿತುಗಳು ಅವರ ಬಗ್ಗೆ ಬರೆದುದಕ್ಕಿಂತ ಬಹಳ ಹೆಚ್ಚಾಗಿದ್ದುವು. ಅವರಿಗೆ ಖಿಲಾಫತ್‌ನೊಂದಿಗೆ ಅತ್ಯಂತ ಹೆಚ್ಚು ಪ್ರೀತಿ ಮತ್ತು ಅನುಸರಣೆಯ ಸಂಬಂಧವಿತ್ತು. ಅದು ಅಸಾಧಾರಣ ಮಟ್ಟದಲ್ಲಿತ್ತು. ಅವರ ಮಕ್ಕಳನ್ನು ಮತ್ತು ಸಂತಾನ ಪರಂಪರೆಯನ್ನು ಸಹ ಖಿಲಾಫತ್ ಮತ್ತು ಜಮಾಅತ್‌ನೊಂದಿಗೆ ಯಾವಾಗಲೂ ಸಂಬಂಧವಿರಿಸುವಂತೆ ಅಲ್ಲಾಹನು ಮಾಡಲಿ. ಅಲ್ಲಾಹನು ಅವರ ಆಧ್ಯಾತ್ಮಿಕ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್. ಜುಮುಅ ನಮಾಝ್ ನಂತರ ಅವರ ನಮಾಝೆ ಜನಾಝ ಗಾಯಿಬ್ ನಿರ್ವಹಿಸುವೆನು.

*****


***Friday Sermon delivered by Hadrath Khaleefatul Masih Al Khamis(atba)***

*At,Masjid Baithul Futhuh London, UK. On 01-02-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon